ಕರ್ನಾಟಕ ಗಣಿ ಪರಿಸರ ಪುನ:ಶ್ಚೇತನ ನಿಗಮ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

# KARNATAKA MINING ENVIRONMENT RESTORATION CORPORATION

(Govt of Karnataka Undertaking)

ಸಂಖ್ಯೆ: CEPMIZ/2023-24/03/RDPR/C/KMERC/00533/2332 ದಿನಾಂಕ: 11.03.2025

## ಪರಿಷ್ಕೃತ ಹಣ ಬಿಡುಗಡೆ ಪತ್ರ

| | | |
|---|---|---|
| ವಿಷಯ: | | CEPMIZ ಯೋಜನೆಯಡಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕಿನ ಯೋಜನೆಯ ಅನುಷ್ಠಾನ ವೆಚ್ಚದ ಅನುದಾನ ಬಿಡುಗಡೆ ಮಾಡುವ ಬಗ್ಗೆ. |
| ಉಲ್ಲೇಖ: | 1 | Administrative Approval for RDPR Project in Molakalmuru Taluk vide Order No. CEPMIZ/2023-24/03/RDPR/C/KMERC/00533 dated: 21.02.2024 |
| - | 2 | ಕಾರ್ಯಪಾಲಕ ಇಂಜನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ ರವರ ಕಛೇರಿ ಪತ್ರದ ಸಂಖ್ಯೆ: ಇಇ/ಪಂ.ರಾ.ಇಂ.ವಿ/ ಚಿದು/ಲೆ.ಶಾ/2024-25/3160 ದಿನಾಂಕ: 01.03.2025. |
| - | 3 | ಹಣ ಬಿಡುಗಡೆ ಪತ್ರ ಸಂಖ್ಯೆ: CEPMIZ/2023-24/03/RDPR/C/KMERC/00533/2304 ದಿನಾಂಕ: 10.03.2025 |

*****

CEPMIZ ಯೋಜನೆಯಡಿಯಲ್ಲಿ ಉಲ್ಲೇಖ (1) ರಂತೆ ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ.

ಉಲ್ಲೇಖ (2) ರ ಪತ್ರದಲ್ಲಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ ರವರಿಂದ CEPMIZ ಯೋಜನೆಯ ಅನುಷ್ಠಾನದಲ್ಲಿ ಕಾಮಗಾರಿಯ ಬಿಲ್ಲಿಗೆ ಮೀಸಲಿಟ್ಟಿರುವ ಮೊತ್ತದಲ್ಲಿ KMERC ಸೂಚಿತ Format 4 (Seeking release of funds for project expenditure) ರಲ್ಲಿ ಬಿಡುಗಡೆ ಮಾಡಲು ಕೋರಿರುತ್ತಾರೆ.

ಅದರಂತೆ ಪರಿಶೀಲಿಸಲಾಗಿ, ಹಣ ಬಿಡುಗಡೆ ಕೋರಿರುವ ಒಟ್ಟು ಮೊತ್ತ ರೂ 3,46,77,670.00 (ಮೂರು ಕೋಟಿ ನಲವತ್ತಾರು ಲಕ್ಷ ಎಪ್ಪತ್ತೇಳು ಸಾವಿರ ಆರು ನೂರು ಎಪ್ಪತ್ತು ರೂಪಾಯಿ) ಗಳನ್ನು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ ರವರ ಹೆಸರಿನಲ್ಲಿರುವ ಕೆನರಾ ಬ್ಯಾಂಕಿನ Child account ಸಂಖ್ಯೆ: 110206005750 IFSC Code-CNRB0011000 ಗೆ ಈ ಕೆಳಕಂಡ ಅನುದಾನ ಮೊತ್ತವನ್ನು ಮುಂದೆ ನಮೂದಿಸಿರುವ ಷರತ್ತಿಗೊಳಪಟ್ಟು ಉಲ್ಲೇಖ (3) ರಲ್ಲಿ ಹಣ ಬಿಡುಗಡೆ ಪತ್ರವನ್ನು ನೀಡಲಾಗಿತ್ತು.

| Sl.No. | Name of the Project | Amount provisioned as per DPR in Rs. | Amount released in Rs. | Balance Amount in Rs. | Present request |
|---|---|---|---|---|---|
| 1 | Improvements to Main Roads (4 nos) and Internal Roads (7 nos) including installation of Solar Lighting in 7 mining affected Villages of Hosadurga Taluk | | | | |
| | CIVIL WORK PORTION | 34,58,82,213 +TP | 0 | 42,85,48,062 | 1st & part bill 2,93,87,856 |

| | | | | | |
|---|---|---|---|---|---|
| | | 1,72,94,111<br>+GST<br>6,53,71,738<br>(42,85,48,062) | | | +GST<br>52,89,814 |
| | | | | **Grand Total** | **3,46,77,670** |

ಆದರೆ ಸದರಿ ಉಲ್ಲೇಖ (3) ರಲ್ಲಿ ಒಟ್ಟು ಮೊತ್ತ ರೂ. 3,46,670.00 ಎಂದಷ್ಟೇ ನಮೂದಾಗಿರುತ್ತದೆ. ಆದ್ದರಿಂದ ಸದರಿ ಹಣ ಬಿಡುಗಡೆ ಪತ್ರವನ್ನು ರದ್ದುಪಡಿಸಿ ಅನುಷ್ಠಾನಾಧಿಕಾರಿಗಳ ಮನವಿಯಂತೆ ರೂ. 3,46,77,670.00 ಮೊತ್ತಕ್ಕೆ ಪರಿಷ್ಕೃತ ಹಣ ಬಿಡುಗಡೆ ಪತ್ರವನ್ನು ಹೊರಡಿಸಲಾಗಿದೆ.

**ಷರತ್ತುಗಳು:**

1. ಆಡಳಿತಾತ್ಮಕ ಅನುಮೋದನೆಯ ರೀತ್ಯಾ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿರುವ ಅನುಷ್ಠಾನಾಧಿಕಾರಿಗಳ ಶಿಫಾರಸ್ಸು ಮತ್ತು ದೃಢೀಕರಣದ ಆಧಾರದ ಮೇಲೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.
2. ಬಿಡುಗಡೆ ಮಾಡಲಾದ ಅನುದಾನ ಯಾವ ಉದ್ದೇಶಕ್ಕಾಗಿ ನೀಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸತಕ್ಕದು.
3. ಬಿಡುಗಡೆ ಮಾಡಲಾದ ಅನುದಾನದದಲ್ಲಿ ಪಾವತಿಸಬೇಕಾದಂತಹ ಶಾಸನಬದ್ಧ ಖಟಾವುಗಳನ್ನು ಅಂದರೆ GST, Royalty, CBF, LWF ಇತ್ಯಾದಿಗಳನ್ನು ಇಲಾಖಾ ನಿಯಮಾನುಸಾರ ಕಡಿತಗೊಳಿಸಿ ಸಂಬಂಧಪಟ್ಟ ಖಾತೆಗಳಿಗೆ ಜಮಾ ಮಾಡತಕ್ಕದ್ದು.
4. ಇಲಾಖೆಯ ನಿಯಮಾನುಸಾರ ಅಗತ್ಯವಿರುವ ದಾಖಲೆಗಳನ್ನು ಹಾಗೂ ಲೆಕ್ಕ ಪತ್ರಗಳನ್ನು ನಿರ್ವಹಿಸತಕ್ಕದ್ದು. ಮುಂದಿನ ದಿನಗಳಲ್ಲಿ ಆಡಿಟ್ ತನಿಖೆಯಲ್ಲಿ ಏನಾದರೂ ವ್ಯತ್ಯಾಸಗಳು/ನ್ಯೂನತೆಗಳು ಕಂಡು ಬಂದಲ್ಲಿ, ಅದಕ್ಕೆ ಅನುಷ್ಠಾನಾಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
5. ಬಿಡುಗಡೆಯಾದ ಅನುದಾನಕ್ಕೆ ಹಣ ಬಳಕೆ ಪ್ರಮಾಣ ಪತ್ರವನ್ನು ಬ್ಯಾಂಕ್ ತಃಖ್ತೆಯೊಂದಿಗೆ ಸಲ್ಲಿಸತಕ್ಕದ್ದು.
6. CEPMIZ ಯೋಜನೆಯ ಅನುಷ್ಠಾನ ಕೈಪಿಡಿಯಲ್ಲಿರುವ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸುವುದು.

Digitally signed by
SANJAY BIJJUR
Date: 11-03-2025
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ.

ಪ್ರತಿಗಳು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ತದುರ್ಗ
3. CFO, KMERC ರವರ ಸೂಕ್ತ ಕ್ರಮಕ್ಕಾಗಿ.
4. ವ್ಯವಸ್ಥಾಪಕರು, Canara Bank, Specialised Business Branch, Cunningham Road, ಬೆಂಗಳೂರು.